ಸುತ್ತಿಕೊಂಡು ಈಚಲ ಹೆಂಡ ಕುಡಿದು ತಣ್ಣಗೆ ಮಲಗಿದಂತೆ ತುಪ್ಪೀರೆಕಾಯಿ ಬಳ್ಳಿ, ಹಾಗಲಕಾಯಿ ಬಳ್ಳಿಗಳೆರೆಡೂ ಸರಿಸಮ ಸವತಿಯರಂತೆ ಸುತ್ತಿಕೊಂಡಿದ್ದರಿಂದ ಬಸಮ್ಮವ್ವ ಹಾಕಿದ ತೆಂಗಪ್ಪನಿಗೆ ವಯಸ್ಸಾದದ್ದೇ ತಿಳೀತಿರಲಿಲ್ಲ. ಹಾಗೆ ನಾಲ್ಕು ಹೆಜ್ಜೆ ಮುಂದೆ ಹಾಕಿ ಬಲಕ್ಕೆ ನೋಡಿದರೆ ಒಂದ್ಯೆದಾರು ಮದ್ದಮಲ್ಲಿಗೆಯ ಹಳದಿ, ನೀಲಿ ಮತ್ತು ಕೆಂಪು ಹೂವಿನ ಗಿಡಗಳು. ಬಸಮ್ಮವ್ವ ಯಳ್ಳಾರ್ತಿಗೆ ದೂರದ ದೇಶವೇ ಆಗಿದ್ದ ಯಾದಗಿರಿ ಪಟ್ಟಣದಿಂದ ಬಹು ಜತನದಿಂದ ತಂದು ಇವುಗಳನ್ನು ಬೆಳೆಸಿದ್ದಳು. “ಅಬಬಬ ಮದ್ಯಾನ ಹುವ್ವ ಅಳ್ಳಾತಾವಂತೆಪೋ ಅದಿಕ್ಕೆ ಮದ್ದಮಲ್ಲಿಗಿ ಅಂತಾರಂತೆ. ನೋಡೊಮ್ಮೊ ಏಸ ನಮೂನಿ ಕಲಾರ್ರೈದಾವ, ಹೂಂ ಬುಡೇ ಲೋಕದಾಗ ಎಂತೆಂತಾ ಗಿಡ ಎಲೆ ಹಸುರುಗಳೈದಾವೋ, ಎಲ್ಲಾ ಪೊರಮಾತ್ಮನ ಆಟಂಗೆ ಯಮ್ಮ” ಅಂತ ಸಣ್ಣೀರಮ್ಮ ಈ ಹೂಗಳನ್ನು ಹರಿಹರನ ಪುಷ್ಪ ರಗಳೆಗಿಂತ ಹೆಚ್ಚಾಗಿ ವರ್ಣಿಸುವುದ ಕಂಡು ಬ್ಯಾಡರೋಣಿ, ರಡ್ಡೇರೋಣಿ, ಕುರುಬುರೋಣಿ ಜನ ಬಂದು ಮಧ್ಯಾಹ್ನದಲ್ಲಿ ಹೂವು ಅರಳೋ ಲೀಲೆಯನ್ನು ಕಣ್ಣಾರೆ ಕಂಡು ಪಾವನರಾಗಿದ್ದರಲ್ಲದೆ, ದೂರದ ಕರ್ನೂಲಿನಿಂದ ಹೂ ಮಾರಿ ಬದುಕಲು ಬಂದ ಸಾಬರ ಜಾಂಗೀರ ಓಡೋಡಿ ಬಂದು “ಯಮ್ಮಂಗೆ ಬಸಮ್ಮವ್ವ ಈ ಉವ್ವದ್ದು ತ್ವಾಟ ಮಾಡಿ ಬುಡಮ್ಮೊ ಜಗ್ಗಿ ಕರ್ಚಾಗತಾವ ನೋಡು ಉವ್ವ. ಗಮಗಮ ಅರ್ಮ್‌ತಾವ. ಉವ್ವದಲ್ಲೇ ನಮೂನಿ ಉವ್ವಮ್ಮಿವು” ಅಂದು ಹೋಗಿದ್ದನು.

ಮದ್ದನ ಮಲ್ಲಿಗೆಯ ಸುವಾಸನೆ ಕುಡಿಯುತ್ತಲೇ ಮುಂದೆ ಹೋದರೆ ಎದುರಾಗುವುದೆ ತಲಬಾಗಿಲು. ಸುತ್ತಾ ನಾಲ್ಕು ಕಡೆ ಯಾವ ಊರಲ್ಲಿಲ್ಲದ ಗಿಳಿ, ನವಿಲಿನ ಚಿತ್ತಾರ ಇರುವ ತಲೆಬಾಗಿಲು ಅವ್ವನ ಮನಿಗೆ ಇಟ್ಟಿದ್ದರು. ಎಂಟು ವರ್ಷದ ಹುಡುಗುರು ಕೂಡ ಈ ಬಾಗಲಿ ದಾಟೋದು ಕಷ್ಟ. ನಾಲ್ಕು ವರ್ಣದ ಚಿತ್ರ, ಆರು ವರ್ಣದ ಕಲೆ ಇಲ್ಲಿತ್ತು. ಬಾಗಿಲು ಮುಚ್ಚಿಕೊಂಡು ಅಗಳಿ ಹಾಕಿಕೊಂಡರೆ ನಾನಂಬ ಗಂಡಸು ಮರ್ಯಾಕಾಗದಲ್ಲಪ್ಪ” ಅಂತಿದ್ದರು ಜನ. ಬಾಗಲ ದಾಟಿ ಹೋದರೆ ಮನೆಯ ಒಳಗೆ ಎರಡೂ ಕಡೆ ನಾಲ್ಕು ನಾಲ್ಕು ಸೀಮೆ ಎತ್ತುಗಳು, ಗ್ವಾದಲಿಯಲ್ಲಿ ಹುರುಳಿನುಚ್ಚು, ಸೆಜ್ಜೆ ನುಚ್ಚು ಮೇಯುತ್ತಾ ಡಿರಿಕಿ ಹೊಡೆಯುತ್ತಿದ್ದವು. ಎಂಟೆತ್ತಿನ ಒಕ್ಕಲುತನ ನೋಡಿಕೊಳ್ಳಲು ಸಣ್ಣೆ, ಅಂಜಿನಿ, ದುರುಗ, ತಿರುಮಲ್ಲಿ, ಶಂಕ್ರಿ ಅವಿರತ ಶ್ರಮಿಸುತ್ತಿದ್ದರು. ಬಸಮ್ಮವ್ವಗ ಈ ಐದು ಜನ ಆಳು ಮಕ್ಕಳಂದ್ರೆ ಪಂಚಪ್ರಾಣ. ಸಣ್ಣೆ, ಅಂಜಿನಿ, ಶಂಕ್ರಿಯರಂತೂ ಅವರಪ್ಪ ಅಮ್ಮನನ್ನೇ ಮರೆತಿದ್ದರು. ಅವ್ವನೇ ಮನೆ, ಅಪ್ಪ, ಅಮ್ಮ ಆಗಿದ್ದಳು. ಅವ್ವನ ಮನೆಯ ಪಡಸಾಲಿ ಇಪ್ಪತ್ತು ಜನ ಕುಂದುರುವಂಥದ್ದು. ಪಡಸಾಲಿಯ ಎಡಕ್ಕ ಮೂವತ್ತು ಕೊಡ ನೀರು ಸದಾ ಇರುವ ಔತುಗನಿ. ಬಲಕ್ಕ ದೊಡ್ಡ ಒರಳು, ಬೀಸುವಕಲ್ಲು, ಬೆಳಗಿನ ಐದುಗಂಟೆಗೆ ಈರಮ್ಮ ಮಲೆಮ್ಮ, ಮಾಳವ್ವ ಜ್ವಾಳ ಬೀಸಲು ಕುಂತರೆ ಒತ್ತು ನೆತ್ತಿಗೆ ಬರುವವರೆಗೂ ಕಲ್ಲು ಬಾಯಿ ಜ್ವಾಳವನ್ನು ನುಂಗಿ ನುಚ್ಚುಮಾಡಿ ಬಿಡುತ್ತಿತ್ತು. ಈರಮ್ಮನ ರೆಟ್ಟೆಬಲದಷ್ಟೇ ಅವಳು ಹಾಡುವ “ಗೂಟ ಇಡಿಯೋನು ಬಾರೆ ಜ್ವಾಳದ ಕಲ್ಲಿನ ಮೈ ಮಾಟ ನೋಡುಣು ಬಾರೆ” ಎಂಬ ಪದ ಓಣಿತುಂಬ ದರುವು ಹಿಡಿದು ಐದಾರುಜನ ಕೇಳಿ ಕಲಿತುಕೊಂಡಿದ್ದರು.

ಈರಮ್ಮ, ಮಲೆಮ್ಮ, ಮಾಳವ್ವ ಮೂವರೂ ಪಕ್ಕದ ಸವತಿ ಊರು ನೆರಣಿಕೆಯೆಂಬೋ ಅಜಾಂಡ, ಬ್ರಹ್ಮಾಂಡ ಸನಾತನ ಶಿಲಾಯುಗದಲ್ಲಿದ್ದಂತಿರುವ ಗುಡ್ಡದ ಬದುವಿನ ಊರಿನವರು. ಇಪ್ಪತ್ತೈದು ವರುಷಗಳಿಂದ ಬಸಮ್ಮವ್ವನ ಆಗುಹೋಗು ನೋಡಿಕೊಂಡೇ ಬೆಳೆದವರು. ಈ ಮೂವರಿಗೂ ಯಳ್ಳಾರ್ತಿಯೆಂಬೋ ಪಂಡಿತರ ಊರೊಳಗೆ ರೆಟ್ಟೆಬಲವಾಗಿದ್ದು ಕಿಂಟಾಲ್ ಕಲ್ಲೆತ್ತಿ ಡೆಮ್ ಅಮ್ಮಂಗ ಒಗೆಯೋ ಮೂವರು ಜಟ್ಟಿಗಳಿಗೆ ಮುಂದೆ ನಿಂತು ತಾನೇ ತಾಳಿಕಟ್ಟಿಸಿದ್ದಳು ಬಸಮ್ಮವ್ವ. ಈ ಮೂವರು ಜಾಣೆಜಂಗ್ಲೆಮ್ಮನವರು ಅಂದ್ರೆ ಬಸಮ್ಮವ್ವ ಮುದ್ದು ಮಾಡಿ ಲಟಗಿ ಮುರುದು ನಗುತ್ತಿದ್ದಳು.

ಅವ್ವನ ಮನೆಯ ಪಡಸಾಲಿಯ ವಿಶಾಲಗೋಡೆಗೆ ಮೀಸೆ ತಿರುವಿದ, ಹಣೆಗೆ ಮೂರು ಬೆರಳಿನಿಂದ ಲೆವೆಲ್ಲಾಗಿ ತೀಡಿದ ಯುಭೂತಿ, ಬಿಳೇ ಅಂಗಿಯ ಮೇಲೆ ಆ ಕಾಲದ ತಿಳಿಗಪ್ಪು ಆಫ್‌ಕೋಟು ತೊಟ್ಟ, ಮಂದಹಾಸದ ಕಣ್ಣು, ಕವಳೆ ಕಾಂತಿಯ ಹೊಳಪಿನ ದೊಡ್ಡದಾದ ಫೋಟೋ ಇದೆ. ಆ ಫೋಟೋದ